ಕರ್ನಾಟಕ ಸರ್ಕಾರ

# ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

# INFRASTRUCTURE DEVELOPMENT DEPARTMENT

# ವಾರ್ಷಿಕ ವರದಿ

# ANNUAL REPORT

2019–20

# ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

# INFRASTRUCTURE DEVELOPMENT DEPARTMENT

# ವಾರ್ಷಿಕ ವರದಿ

# ANNUAL REPORT

2019–20

# ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

## 2019–20ನೇ ಸಾಲಿನ ವಾರ್ಷಿಕ ವರದಿ

### 1. ಸಾಂಸ್ಥಿಕ ಚೌಕಟ್ಟು

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯು 1996ರ ಸೆಪ್ಟೆಂಬರ್‌ನಲ್ಲಿ ಸ್ಥಾಪನೆಯಾಯಿತು. ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಲ್ಲಿ ಕೆಳಕಂಡ ಹೇಳಲಾದ ಕಾರ್ಯಗಳ ಬಗ್ಗೆ ವ್ಯವಹರಿಸಲಾಗುತ್ತಿದೆ.

(ಎ) ರಾಜ್ಯದಲ್ಲಿ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದ (ಪಿಪಿಪಿ) ಆಧಾರದ ಮೇಲೆ ಮೂಲಸೌಲಭ್ಯ ಯೋಜನೆಗಳನ್ನು ಅಭಿವೃದ್ಧಿಪಡಿಸಲು ವಿವಿಧ ಇಲಾಖೆಗಳಿಗೆ ಮಾರ್ಗದರ್ಶನ ನೀಡುವುದು ಮತ್ತು ಪಿಪಿಪಿ ಮಾದರಿಯ ಅನುಷ್ಠಾನವನ್ನು ಸುಗಮಗೊಳಿಸುವುದು.

(ಬಿ) ರಾಜ್ಯದಲ್ಲಿ ವಿಮಾನ ನಿಲ್ದಾಣಗಳು ಮತ್ತು ಸಣ್ಣ ವಿಮಾನ ಚಲಿಸುವ ಪಥಗಳನ್ನು (ಏರ್‌ಸ್ಟ್ರಿಪ್ಸ್) ಅಭಿವೃದ್ಧಿಪಡಿಸುವುದು.

(ಸಿ) ರಾಜ್ಯದಲ್ಲಿ ರೈಲ್ವೆ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದ ರೈಲ್ವೆ ಇಲಾಖೆಯೊಂದಿಗೆ ಸಮನ್ವಯ ಸಾಧಿಸುವುದು.

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯು ಕರ್ನಾಟಕ ಸರ್ಕಾರದ ಸಚಿವಾಲಯದ ಒಂದು ಇಲಾಖೆಯಾಗಿದ್ದು, ಪ್ರಸ್ತುತ ಪ್ರಧಾನ ಕಾರ್ಯದರ್ಶಿಗಳು ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. ಇವರಿಗೆ ಓರ್ವ ಅಪರ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ, ಉಪ ಕಾರ್ಯದರ್ಶಿ ಮತ್ತು ಇಬ್ಬರು ಅಧೀನ ಕಾರ್ಯದರ್ಶಿಗಳು ನೆರವಾಗುತ್ತಾರೆ. ರಾಜ್ಯ ಪಿಪಿಪಿ ನೋಡಲ್ ಅಧಿಕಾರಿಯಾದ ಪ್ರಧಾನ ಕಾರ್ಯದರ್ಶಿಗಳು, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಅಧೀನದಲ್ಲಿ "ಮೂಲಸೌಲಭ್ಯ ಯೋಜನೆಯಲ್ಲಿ **ಪಿಪಿಪಿ**ಯನ್ನು ಸುಗಮಗೊಳಿಸುವುದಕ್ಕಾಗಿ" ಭಾರತ ಸರ್ಕಾರದ ಬಾಹ್ಯ ವ್ಯವಹಾರಗಳ ಇಲಾಖೆ (**ಡಿಇಎ**) ಕಾರ್ಯಕ್ರಮದ ಅಡಿಯಲ್ಲಿ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ (**ಎಡಿಬಿ**)ನಿಂದ ತಾಂತ್ರಿಕ ನೆರವನ್ನು ಪಡೆದುಕೊಂಡು ಪಿಪಿಪಿ ವಿಭಾಗವನ್ನು ಸ್ಥಾಪಿಸಲಾಗಿದೆ. ಈ ವಿಭಾಗವು, **ಎಡಿಬಿಯ ಪಿಪಿಪಿ** (ತಜ್ಞರು) ಮತ್ತು **ಎಂಐಎಸ್** (ತಜ್ಞರು), ಒಬ್ಬರು ಅಧೀನ ಕಾರ್ಯದರ್ಶಿ ಮತ್ತು ಇಬ್ಬರು ಸಹಾಯಕ ನಿರ್ದೇಶಕರನ್ನೊಳಗೊಂಡಿದ್ದು ಇದಕ್ಕೆ ಪಿಪಿಪಿ ಕೋಶದ ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ.

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಗೆ ಈ ಕೆಳಕಂಡ ಅಭಿವೃದ್ಧಿ ಸಂಸ್ಥೆಗಳು ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ:

(ಎ) ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮವು (ಕೆಎಸ್‌ಐಐಡಿಸಿ) BIAL ಮತ್ತು GAIL ವಿಷಯಗಳಿಗೆ ನೋಡಲ್ ಏಜನ್ಸಿಯಗಿರುತ್ತದೆ.

(ಬಿ) ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ, ಕೆ–ರೈಡ್

(ಸಿ) ಹಾಸನ–ಮಂಗಳೂರು ರೈಲ್ವೆ ಅಭಿವೃದ್ಧಿ ನಿಗಮ

(ಡಿ) ಮೂಲಸೌಲಭ್ಯ ಅಭಿವೃದ್ಧಿ ನಿಗಮ (ಕರ್ನಾಟಕ) ನಿಯಮಿತ.

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸಂಬಂಧಪಟ್ಟ ಸಂಸ್ಥೆಗಳು ಆರಂಭಿಸಿದ/ ಉದ್ದೇಶಿಸಿದ **ಪಿಪಿಪಿ** ಅಡಿಯಲ್ಲಿನ ಯೋಜನೆಗಳನ್ನು ರೂಪಿಸುವುದಕ್ಕಾಗಿ ಹಾಗೂ ಕಾರ್ಯಗತಗೊಳಿಸುವುದಕ್ಕಾಗಿ ಉಪಯುಕ್ತ ಸಲಹಾ ಸೇವೆಗಳನ್ನು ಈ ಇಲಾಖೆಯು ಒದಗಿಸುತ್ತದೆ.

2019–20 ನೇ ಸಾಲಿಗೆ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಆಯವ್ಯಯ ಹಾಗೂ ಮರು ಹೊಂದಾಣಿಕಯಡಿಯಲ್ಲಿ ರೂ. 48156.59 ಲಕ್ಷಗಳನ್ನು ಒದಗಿಸಲಾಗಿದ್ದು, ರೂ. 43523.20 ಲಕ್ಷಗಳು ವೆಚ್ಚವಾಗಿರುತ್ತದೆ. ಕಳೆದ ಮೂರು ವರ್ಷಗಳಲ್ಲಿ ಇಲಾಖೆಯ ಕಾರ್ಯಧಾರಿತ ಆಯವ್ಯಯ (Budget performance) ಈ ಕಳೆಕಂಡಂತೆ ಇರುತ್ತದೆ.

| ಆರ್ಥಿಕ ವರ್ಷ | ಅನುದಾನ (ರೂ. ಕೋಟಿಗಳಲ್ಲಿ) | ವೆಚ್ಚ (ರೂ. ಕೋಟಿಗಳಲ್ಲಿ) | ಶೇಕಡಾವಾರು ವೆಚ್ಚ |
|---|---|---|---|
| 2017–18 | 789.99 | 778.92 | 98.60 |
| 2018–19 | 600.14 | 572.66 | 99.87 |
| 2019–20 | 481.57 | 435.23 | 90.38 |

## 1.ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆ (ಬಿಐಎಪಿ)

ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣವು, ಪಿಪಿಪಿ ಮಾದರಿಯಲ್ಲಿ ರೂಪಿಸಲಾದ ರಾಷ್ಟ್ರದ ಪ್ರಪ್ರಥಮ ಗ್ರೀನ್‌ಫೀಲ್ಡ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣವಾಗಿದ್ದು, ಬಿಐಎಎಲ್ ಕಂಪನಿಯು ಈ ವಿಮಾನ ನಿಲ್ದಾಣವನ್ನು ಅಭಿವೃದ್ದಿಪಡಿಸಿದ್ದು, 2008ರ ಮೇ ತಿಂಗಳಿನಲ್ಲಿ ತನ್ನ ಕಾರ್ಯಾಚರಣೆಯನ್ನು ಪ್ರಾರಂಭಿಸಿರುತ್ತದೆ.

ಈ ಕಂಪನಿಯಲ್ಲಿ ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರಗಳು ಜಂಟಿಯಾಗಿ ಶೇ.26ರಷ್ಟು ಷೇರುಗಳನ್ನು ಹೊಂದಿದ್ದು, ಉಳಿದ ಶೇ.74ರಷ್ಟು ಷೇರುಗಳನ್ನು ಖಾಸಗಿ ಪ್ರವರ್ತಕರು ಹೊಂದಿರುತ್ತಾರೆ.

ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣವು ದೇಶದಲ್ಲಿರುವ ದೊಡ್ಡ ವಿಮಾನ ನಿಲ್ದಾಣಗಳಲ್ಲಿ ಮೂರನೆಯ ಸ್ಥಾನಮಾನ ಪಡೆದಿದ್ದು, 2019–20ನೇ ಸಾಲಿನಲ್ಲಿ 33.40 ಮಿಲಿಯನ್ ಪ್ರಯಾಣಿಕರ ಸಂಚಾರವನ್ನು ತಲುಪಿದ್ದು ವಿಶ್ವದಲ್ಲೇ ಅತಿ ವೇಗವಾಗಿ ಅಭಿವೃದ್ಧಿಗೊಳ್ಳುತ್ತಿರುವ ವಿಮಾನ ನಿಲ್ದಾಣಗಳಲ್ಲಿ ಕೆಂಪೇಗೌಡ ಅಂತಾರಾಷ್ಟ್ರೀಯ ನಿಲ್ದಾಣವು ಸಹ ಒಂದಾಗಿ ಗುರುತಿಸಲ್ಪಟ್ಟಿದೆ.

ಎರಡನೇ ರನ್–ವೇ ಸಿವಿಲ್ ಕಾಮಗಾರಿಯು ಪೂರ್ಣಗೊಂಡಿದ್ದು, ಎರಡನೇ ಟರ್ಮಿನಲ್‌ನ ಕಟ್ಟಡ ವಿನ್ಯಾಸವನ್ನು ತಯಾರಿಸಲಾಗುತ್ತಿದೆ.

## 2. ಇತರೆ ವಿಮಾನ ನಿಲ್ದಾಣಗಳು.

### 2.1 ವಿಜಯಪುರ ವಿಮಾನ ನಿಲ್ದಾಣ:

ವಿಮಾನ ನಿಲ್ದಾಣಕ್ಕೆ ಗುರುತಿಸಲಾದ ಸ್ಥಳವನ್ನು ಸಮತಟ್ಟುಗೊಳಿಸುವುದಕ್ಕೆ ರೂ.100 ಕೋಟಿಗಳ ಎಂದು ಅವಶ್ಯಕತೆ ಇದೆ ಎಂದು ಎಎಐ ಇವರಿಂದ ವರದಿ ಪಡೆದ ನಂತರ ಖಾಸಗಿ ಅಭಿವೃದ್ಧಿದಾರರೊಂದಿಗೆ ಮಾಡಿಕೊಂಡ ಒಪ್ಪಂದವನ್ನು 2014 ರಲ್ಲಿ ಮುಕ್ತಾಯಗೊಳಿಸಲಾಗಿ, ಪ್ರಸ್ತುತ ಲೋಕೋಪಯೋಗಿ ಇಲಾಖೆಯಿಂದ ವಿಜಯಪುರ ವಿಮಾನ ನಿಲ್ದಾಣಕ್ಕೆ ಸಂಬಂಧಪಟ್ಟಂತೆ ಅಂದಾಜು ಪಟ್ಟಿಯು ತಯಾರಿಸಲಾಗಿದ್ದು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

**2.2 ಹಾಸನ ವಿಮಾನ ನಿಲ್ದಾಣ:**

ಹಾಸನ ವಿಮಾನ ನಿಲ್ದಾಣವನ್ನು ರಾಜ್ಯ ಸರ್ಕಾರದ ವತಿಯಿಂದ ಅನುಷ್ಠಾನಗೊಳಿಸಲು ನಿರ್ಧರಿಸಲಾಗಿದ್ದು, ಈ ಸಂಬಂಧ ಮೆ: RITES ಲಿಮಿಟೆಡ್ ಇವರನ್ನು Transaction Advisory/Technical Consultancy ಸೇವೆಗಾಗಿ ನೇಮಿಸಲಾಗಿರುತ್ತದೆ. ಸದರಿಯವರಿಂದ ವಿಸ್ತೃತ ಕಾರ್ಯನಿರ್ವಹಣಾ ವರದಿಯು ನಿರೀಕ್ಷೆಯಲ್ಲಿದೆ. ಸದರಿ ವಿಮಾನ ನಿಲ್ದಾಣ ಯೋಜನೆಗಾಗಿ ಸುಮಾರು 536 ಎಕರೆ ಜಮೀನು ಸ್ವಾಧೀನಗೊಂಡು ಸರ್ಕಾರದ (ಜಿಲ್ಲಾಧಿಕಾರಿ, ಹಾಸನ) ಸುಪರ್ಧಿಯಲ್ಲಿರುತ್ತದೆ.

**2.3 ಬಳ್ಳಾರಿ ವಿಮಾನ ನಿಲ್ದಾಣ:**

ಬಳ್ಳಾರಿ ವಿಮಾನ ನಿಲ್ದಾಣವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ದಿಪಡಿಸಲಾಗುತ್ತಿದ್ದು, ಮೆ:ಮಾರ್ಗ್ ಶ್ರೀ ಕೃಷ್ಣದೇವರಾಯ ಏರ್‌ಪೋರ್ಟ್ ಪ್ರೈ.ಲಿ., ಇವರನ್ನು ಅಭಿವೃದ್ದಿದಾರರನ್ನಾಗಿ ಆಯ್ಕೆ ಮಾಡಲಾಗಿರುತ್ತದೆ. ವಿಮಾನ ನಿಲ್ದಾಣ ಅಭಿವೃದ್ದಿಪಡಿಸಲು 823 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಂದು ರಾಜ್ಯ ಸರ್ಕಾರದ ಸುಪರ್ಧಿಯಲ್ಲಿರುತ್ತದೆ. ಯೋಜನಾ ಅಭಿವೃದ್ದಿ ಒಪ್ಪಂದ ಮತ್ತು ಭೂಕರಾರು ಒಪ್ಪಂದವನ್ನು ಅಂತಿಮಗೊಳಿಸಲಾಗುತ್ತಿದೆ. ಅಭಿವೃದ್ದಿದಾರರನ್ನು ಭೂಸ್ವಾದೀನ ಪಡಿಸಿಕೊಂಡಿರುವ 823 ಎಕರೆ ಜಮೀನನ್ನು ತಮ್ಮ ಸುಪರ್ಧಿಗೆ ತೆಗೆದುಕೊಂಡು ನಿರ್ಮಾಣ ಕಾಮಗಾರಿಗಳನ್ನು ಪ್ರಾರಂಭಿಸುವ ಬಗ್ಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಗಿದೆ.

**2.4 ಶಿವಮೊಗ್ಗ ವಿಮಾನ ನಿಲ್ದಾಣ:**

ಶಿವಮೊಗ್ಗ ವಿಮಾನ ನಿಲ್ದಾಣದ ನಿರ್ಮಾಣ ಕಾಮಗಾರಿಗಾಗಿ ಮೇ|| ರೈಟ್ಸ್ ಸಂಸ್ಥೆಯು ಸಲ್ಲಿಸಿರುವ ರೂ.220.00 ಕೋಟಿ ವೆಚ್ಚಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಲೋಕೋಪಯೋಗಿ ಇಲಾಖೆಗೆ ಶಿವಮೊಗ್ಗ ವಿಮಾನ ನಿಲ್ದಾಣ ಅಭಿವೃದ್ಧಿ ಕಾಮಗಾರಿಯನ್ನು ಫೆಬ್ರವರಿ 2020ರಲ್ಲಿ ವಹಿಸಲಾಗಿದೆ. .

**3. ಭಾರತೀಯ ವಿಮಾನ ನಿಲ್ದಾಣಗಳ ಒಡೆತನಕ್ಕೆ ಸೇರಿದ ವಿಮಾನ ನಿಲ್ದಾಣಗಳು.**

**3.1 ಮೈಸೂರು ವಿಮಾನ ನಿಲ್ದಾಣ:**

ಮೈಸೂರು ವಿಮಾನ ನಿಲ್ದಾಣದ ಮೊದಲ ಹಂತದ ಅಭಿವೃದ್ಧಿಗಾಗಿ ಅವಶ್ಯವಿದ್ದ 175 ಎಕರೆ ಜಮೀನಿನ ಭೂಸ್ವಾಧೀನ ವೆಚ್ಚವನ್ನು ರಾಜ್ಯ ಸರ್ಕಾರವು ಭರಿಸಿ, ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ಜಮೀನನ್ನು ಹಸ್ತಾಂತರಿಸಲಾಗಿರುತ್ತದೆ. ಸದರಿ ವಿಮಾನ ನಿಲ್ದಾಣವು ದಿನಾಂಕ:1–10–2010ರಿಂದ ಕಾರ್ಯಾರಂಭ ಗೊಂಡಿರುತ್ತದೆ. ಈ ವಿಮಾನ ನಿಲ್ದಾದಲ್ಲಿ ಎ.320 ವಿಮಾನವನ್ನು ಕಾರ್ಯಾಚರಣೆಗೊಳಿಸಲು ರನವೇಯನ್ನು ವಿಸ್ತರಿಸಲು ರಾಷ್ಟ್ರೀಯ ಹೆದ್ದಾರಿ–212ರ ಹತ್ತಿರ ಅಂಡರ್ ಪಾಸ್ ನಿರ್ಮಾಣಕ್ಕಾಗಿ ನಾಗರೀಕ ವಿಮಾನಯಾನ ಮಂತ್ರಾಲಯವು ಅನುಮತಿಯನ್ನು ನೀಡಿರುತ್ತದೆ. ಏತನ್ಮಧ್ಯೆ ಬೆಂಗಳೂರಿನ ಯಲಹಂಕದಲ್ಲಿ ಭಾರತೀಯ ವಾಯುಸೇನೆಯ ನಿಲ್ದಾಣವನ್ನು ಮೈಸೂರು ವಿಮಾನ ನಿಲ್ದಾಣಕ್ಕೆ ವರ್ಗಾಹಿಸಲು ರಾಜ್ಯ ಸರ್ಕಾರವು ನಿರಾಪೇಕ್ಷಣಾ ಪತ್ರವನ್ನು ನೀಡಿದ್ದು, ಕೇಂದ್ರ ಸರ್ಕಾರದ ಸಹಮತಿಯನ್ನು ನಿರೀಕ್ಷಿಸಲಾಗಿದೆ. ಮುಂದುವರೆದು, ಮೈಸೂರು ವಿಮಾನ ನಿಲ್ದಾಣದ ವಿಸ್ತರಣೆಗೆ ಕುರಿತಂತೆ ಕೇಂದ್ರ ಸರ್ಕಾರದ ನಾಗರೀಕ ವಿಮಾನಯಾನ ಮಂತ್ರಾಲಯದ ಹಂತದಲ್ಲಿ ಚರ್ಚಿಸಲಾಗುತ್ತಿದೆ.

**3.2 ಮಂಗಳೂರು ವಿಮಾನ ನಿಲ್ದಾಣ:**

ಮಂಗಳೂರು ವಿಮಾನ ನಿಲ್ದಾಣವು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ ಒಡೆತನದಲ್ಲಿದ್ದು, ರಾಜ್ಯ ಸರ್ಕಾರ ಒಪ್ಪಿಕೊಂಡಿರುವಂತೆ, ಭೂಸ್ವಾಧೀನದ ವೆಚ್ಚ, 2ನೇ ರನ್‌ವೇ, ಹೊಸ ಟರ್ಮಿನಲ್ ಕಟ್ಟಡ ನಿರ್ಮಾಣ ಮತ್ತು ಪುನರ್ವಸತಿ ಕಾರ್ಯದ

ವೆಚ್ಚವನ್ನು ಭರಿಸಲಾಗುತ್ತದೆ. ಮಂಗಳೂರು ವಿಮಾನ ನಿಲ್ದಾಣವು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ ಅಧೀನದಲ್ಲಿದ್ದು, ಪ್ರಸ್ತುತ ಪಿಪಿಪಿ ಮಾದರಿಯಲ್ಲಿ ಖಾಸಗಿ ಭಾಗಿದಾರರಿಗೆ ನೀಡುವ ಪ್ರಕ್ರಿಯೆಯು ಚಾಲನೆಯಲ್ಲಿರುತ್ತದೆ.

**3.3. ಕಲಬುರಗಿ ವಿಮಾನ ನಿಲ್ದಾಣ:**

ಕಲಬುರಗಿ ವಿಮಾನ ನಿಲ್ದಾಣದ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ವಹಿಸಲು ದಿನಾಂಕ:24.08.2019 ರಂದು ಸರ್ಕಾರದ ಪರವಾಗಿ ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ಹಾಗೂ ಕೇಂದ್ರ ನಾಗರಿಕ ವಿಮಾನಯಾನ ಮಂತ್ರಾಲಯದ ಪರವಾಗಿ ಭಾರತೀಯ ವಿಮಾನಯಾನ ಪ್ರಾಧಿಕಾರ ಇವರೊಂದಿಗೆ ಒಪ್ಪಂದವನ್ನು ಸಹಿ ಮಾಡಲಾಗಿದೆ ಹಾಗೂ ದಿನಾಂಕ:22.11.2019 ರಿಂದ ವಿಮಾನಯಾನ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದ್ದು, ಪ್ರತಿದಿನ ಎರಡು ವಿಮಾನಗಳು ಕಲಬುರಗಿ–ಬೆಂಗಳೂರು–ಕಲಬುರಗಿ ಇಲ್ಲಿಗೆ ಕಾರ್ಯಾಚರಣೆಯನ್ನು ನಡೆಸುತ್ತಿವೆ.

**3.4 ಇತರರ ಒಡೆತನದಲ್ಲಿರುವ ವಿಮಾನ ನಿಲ್ದಾಣ:**

**ಬೀದರ್ ವಿಮಾನ ನಿಲ್ದಾಣ:**

ಬೀದರ್ ವಿಮಾನ ನಿಲ್ದಾಣದ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಜಿ.ಎಮ್.ಆರ್. ಹೈದ್ರಾಬಾದ್ ಅಂತರರಾಷ್ಟ್ರೀಯ ವಿಮಾನ ನಿಯಮಿತ ಸಂಸ್ಥೆಗೆ ವಹಿಸಲು ದಿನಾಂಕ:24.08.2019 ರಂದು ಸರ್ಕಾರದ ಪರವಾಗಿ ಜಿಲ್ಲಾಧಿಕಾರಿಗಳು, ಬೀದರ್ ಹಾಗೂ ಜಿ.ಎಮ್.ಆರ್. ಹೈದ್ರಾಬಾದ್ ಅಂತರರಾಷ್ಟ್ರೀಯ ವಿಮಾನ ನಿಯಮಿತ ಇವರೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ ಹಾಗೂ ದಿನಾಂಕ:07.02.2020 ರಿಂದ ವಿಮಾನಯಾನ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದ್ದು, ಪ್ರಸ್ತುತ ಬೀದರ್–ಬೆಂಗಳೂರು–ಬೀದರ್ ನಡುವೆ ಪ್ರತಿದಿನ ವಿಮಾನಯಾನ ಕಾರ್ಯಾಚರಣೆ ನಡೆಸಲಾಗುತ್ತಿದೆ.

## 4. ದೇವನಹಳ್ಳಿ ಬ್ಯುಸಿನೆಸ್ ಪಾರ್ಕ್ ಮತ್ತು ಬೆಂಗಳೂರು ಅಂತರಾಷ್ಟ್ರೀಯ ಸಮ್ಮೇಳನ ಕೇಂದ್ರ.

ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ Empowered Committee ಸಭೆಯಲ್ಲಿ ಕೆ.ಎಸ್.ಐ.ಐ.ಡಿ.ಸಿ.ಯು ತಯಾರಿಸಿರುವ ಪರಿಷ್ಕೃತ ಮಾಸ್ಟರ್ ಪ್ಲಾನ್ (Revised Master Plan) ನಿಂದ ಅಂತರಾಷ್ಟ್ರೀಯ ಸಮ್ಮೇಳನ ಕೇಂದ್ರವನ್ನು ಕೈಬಿಡಲು ಹಾಗೂ ಸದರಿ ಯೋಜನೆಗಾಗಿ ಮಾಸ್ಟರ್ ಪ್ಲಾನ್‌ನಲ್ಲಿ ಮೀಸಲಿಡಲಾಗಿರುವ 35 ಎಕರೆ ಜಮೀನಿನಲ್ಲಿ ಸರ್ಕಾರದ ನಿಯಮಗಳನ್ವಯ ಸಾರ್ವಜನಿಕ ಆಧಾರಿತ ಯೋಜನೆಗಳಿಗಳನ್ನು ಅಭಿವೃದ್ದಿ ಪಡಿಸಲು ತೀರ್ಮಾನಿಸಲಾಗಿದೆ. ಪ್ರಸ್ತುತ ದೇವನಹಳ್ಳಿ ಬಿಸಿನೆಸ್ ಪಾರ್ಕ್ ಅನ್ನು 2020–21 ರಲ್ಲಿ ಅಭಿವೃದ್ಧಿಗೊಳಿಸುವ ಸಂಬಂಧ ಪರಿಶೀಲನೆ ನಡೆಸಲಾಗುತ್ತಿದೆ.

**5. ರೈಲ್ವೆ ಯೋಜನೆಗಳು**

**5.1 ಮುನಿರಾಬಾದ್–ಮೆಹಬೂಬನಗರ (ಗಿಣಿಗೇರಾ – ರಾಯಚೂರು) ನೂತನ ರೈಲ್ವೆ ಮಾರ್ಗ ಯೋಜನೆ:**

ರಾಜ್ಯ ಸರ್ಕಾರವು ಮುನಿರಾಬಾದ್–ಮೆಹಬೂಬನಗರ ರೈಲ್ವೆ ಮಾರ್ಗ ಯೋಜನೆಯನ್ನು ಪರಿಷ್ಕೃತ ಅಂದಾಜು ವೆಚ್ಚ ರೂ.1350.91 ಕೋಟಿಗಳಲ್ಲಿ ಶೇ.50.50 ವೆಚ್ಚ ಹಂಚಿಕೆಯಡಿ ಕೈಗೆತ್ತಿಕೊಂಡಿದೆ. ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ.675.45 ಕೋಟಿಗಳಲ್ಲಿ ಈವರೆವಿಗೂ ರೂ.550.23 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಹಾಗೂ ರೈಲ್ವೆ ಇಲಾಖೆಗೆ 1320.80 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿ ಹಸ್ತಾಂತರಿಸಲಾಗಿದೆ.

ಗಿಣಿಗೇರಾ- ಗಂಗಾವತಿ ನಡುವಿನ 38.80 ಕಿ.ಮಿ ಮಾರ್ಗದ ಕಾಮಗಾರಿ ಪೂರ್ಣಗೊಂಡು ರೈಲುಗಳ ಸೇವೆಯನ್ನು ಆರಂಭಿಸಲಾಗಿದೆ. ಗಂಗಾವತಿ- ರಾಯಚೂರು ಸಿಂಧನೂರು ಮಾರ್ಗವಾಗಿ ಒಟ್ಟು 126.76 ಕಿ.ಮಿ ಭೂ-ಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಭೌತಿಕವಾಗಿ ಶೇಕಡ 40 ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ. ಈ ಯೋಜನೆಯನ್ನು ಜೂನ್ 2024ನೇ ಸಾಲಿನೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

### 5.2 ತುಮಕೂರು–ದಾವಣಗೆರೆ ನೂತನ ರೈಲು ಮಾರ್ಗ ಯೋಜನೆ:

ರಾಜ್ಯ ಸರ್ಕಾರವು ತುಮಕೂರು–ದಾವಣಗೆರೆ ರೈಲು ಮಾರ್ಗ ಯೋಜನೆಯನ್ನು ರೈಲ್ವೆ ಇಲಾಖೆಯೊಂದಿಗೆ ಶೇಕಡ 50:50 ವೆಚ್ಚ ಹಂಚಿಕೆಯಡಿ ರೂ.1801.00 ಅಂದಾಜು ವೆಚ್ಚದಲ್ಲಿ ಹಾಗೂ ಅಗತ್ಯವಿರುವ ಜಮೀನನ್ನು ಉಚಿತವಾಗಿ ರೈಲ್ವೆ ಇಲಾಖೆಗೆ ನೀಡುವ ಜವಬ್ದಾರಿಯೊಂದಿಗೆ ಕೈಗೆತ್ತಿಕೊಂಡಿದೆ.

ರಾಜ್ಯ ಸರ್ಕಾರವು ಪ್ರಸ್ತುತ ನೈರುತ್ಯ ರೈಲ್ವೆ ಇಲಾಖೆಗೆ ನಿರ್ಮಾಣಕ್ಕಾಗಿ ರೂ.50 ಕೋಟಿಗಳನ್ನು ಹಾಗೂ ಭೂಸ್ವಾಧೀನ ವೆಚ್ಚಕ್ಕಾಗಿ ರೂ.188.93 ಕೋಟಿಗಳನ್ನು ಜಿಲ್ಲಾಧಿಕಾರಿಯವರಿಗೆ ಬಿಡುಗಡೆಗೊಳಿಸಿದೆ. 136 ಎಕರೆ ಜಮೀನನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದೆ. ರೈಲ್ವೆ ಇಲಾಖೆಯು ಉರಿಕೆರೆ –ತಿಮ್ಮರಾಜನಹಳ್ಳಿ 12.ಕಿ.ಮೀ ಮಾರ್ಗದ ಕಾಮಗಾರಿಯನ್ನು ಪ್ರಾರಂಭಿಸಿರುತ್ತದೆ.

### 5.3 ತುಮಕೂರು–ರಾಯದುರ್ಗ ನೂತನ ರೈಲು ಮಾರ್ಗ ಯೋಜನೆ:

ರಾಜ್ಯ ಸರ್ಕಾರವು ತುಮಕೂರು–ರಾಯದುರ್ಗ ರೈಲು ಮಾರ್ಗ ಯೋಜನೆಯನ್ನು ರೈಲ್ವೆ ಇಲಾಖೆಯೊಂದಿಗೆ ಶೇಕಡ 50:50 ವೆಚ್ಚ ಹಂಚಿಕೆಯಡಿ ರೂ.479.59 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಂಡಿದ್ದು, ರಾಜ್ಯದ ಪಾಲಿನ ಮೊತ್ತ ರೂ.239.79 ಕೋಟಿಗಳಲ್ಲಿ ಈವರೆವಿಗೂ ರೂ.170.00 ಕೋಟಿಯನ್ನು ಬಿಡುಗಡೆಗೊಳಿಸಿದೆ.

ಒಟ್ಟು 479.08 ಎಕರೆ ಜಮೀನನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದ್ದು, ಅಗತ್ಯವಿರುವ ಉಳಿದ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

### 5.4 ಬಾಗಲಕೋಟೆ – ಕುಡಚಿ ನೂತನ ರೈಲ್ವೆ ಮಾರ್ಗ ಯೋಜನೆ:

ರಾಜ್ಯ ಸರ್ಕಾರವು ಬಾಗಲಕೋಟೆ – ಕುಡಚಿ ರೈಲು ಮಾರ್ಗ ಯೋಜನೆಯನ್ನು ರೈಲ್ವೆ ಇಲಾಖೆಯೊಂದಿಗೆ ಶೇಕಡ 50:50 ವೆಚ್ಚ ಹಂಚಿಕೆಯಡಿ ರೂ.816.14 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಂಡಿದ್ದು, ರಾಜ್ಯದ ಪಾಲಿನ ಮೊತ್ತ ರೂ.408.07 ಕೋಟಿಗಳಲ್ಲಿ ಈವರೆವಿಗೂ ರೂ.148.84 ಕೋಟಿಯನ್ನು ನಿರ್ಮಾಣ ಕಾಮಗಾರಿಗೆ ರೈಲ್ವೆ ಇಲಾಖೆಗೆ ಹಾಗೂ ರೂ.240.61 ಕೋಟಿಗಳನ್ನು ಭೂಸ್ವಾಧೀನ ವೆಚ್ಚಕ್ಕಾಗಿ ಜಿಲ್ಲಾಧಿಕಾರಿಯವರಿಗೆ ಬಿಡುಗಡೆಗೊಳಿಸಲಾಗಿದೆ. ಉಳಿದ ಭೂಮಿಯ ಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ. ಬಾಗಲಕೋಟೆ – ಖಜ್ಜಿಡೋಣಿ ನಡುವಿನ 30 ಕಿ.ಮೀ ಮಾರ್ಗದ ಕಾಮಗಾರಿ ಪೂರ್ಣಗೊಂಡು ರೈಲುಗಳ ಸೇವೆಯನ್ನು ಆರಂಬಿಸಲಾಗಿದೆ.

### 5.5 ಚಿಕ್ಕಮಗಳೂರು–ಬೇಲೂರು ನೂತನ ರೈಲ್ವೆ ಮಾರ್ಗ ಯೋಜನೆ:

ರಾಜ್ಯ ಸರ್ಕಾರವು ಚಿಕ್ಕಮಗಳೂರು–ಸಕಲೇಶಪುರ ರೈಲು ಮಾರ್ಗ ಯೋಜನೆಯನ್ನು ರೈಲ್ವೆ ಇಲಾಖೆಯೊಂದಿಗೆ ಶೇಕಡ 50:50 ವೆಚ್ಚ ಹಂಚಿಕೆಯಡಿ ಅಂದಾಜು ವೆಚ್ಚ ರೂ.657.80 ಕೋಟಿಗಳ ಕೈಗೆತ್ತಿಕೊಂಡಿದ್ದು, ನಿರ್ಮಾಣ ಕಾಮಗಾರಿಗಾಗಿ ರೈಲ್ವೆ ಇಲಾಖೆ ರೂ. 25.00 ಕೋಟಿಗಳನ್ನು ಹಾಗೂ ಈ ಯೋಜನೆಗೆ ಅಗತ್ಯವಿರುವ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ರೂ. 85.14 ಕೋಟಿಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

ಕಡೂರು – ಚಿಕ್ಕಮಗಳೂರು ಮಾರ್ಗದ ಕಾಮಗಾರಿ ಪೂರ್ಣಗೊಂಡಿರುತ್ತದೆ. ಅಗತ್ಯವಿರುವ ಉಳಿದ ಜಮೀನಿನ ಭೂ ಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ.

### 5.6 ಗದಗ–ವಾಡಿ ನೂತನ ರೈಲ್ವೆ ಮರ್ಗ ಯೋಜನೆ:

ರಾಜ್ಯ ಸರ್ಕಾರವು ಗದಗ–ವಾಡಿ ರೈಲ್ವೆ ಮಾರ್ಗ ಯೋಜನೆಯನ್ನು ರೈಲ್ವೆ ಮಂತ್ರಾಲಯದೊಂದಿಗೆ ಶೇ. 50:50 ವೆಚ್ಚ ಹಂಚಿಕೆಯಡಿ ಹಾಗೂ ಈ ಮಾರ್ಗಕ್ಕೆ ಅಗತ್ಯವಿರುವ ಭೂಮಿಯನ್ನು ರಾಜ್ಯ ಸರ್ಕಾರವು ಉಚಿತವಾಗಿ ನೀಡುವ ಜವಬ್ದಾರಿಯೊಂದಿಗೆ ರೂ. 1922.14 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಂಡಿದೆ. ರಾಜ್ಯ ಸರ್ಕಾರದ ಪಾಲಿನ ಮೊತ್ತದಲ್ಲಿ ರೂ. 110.29 ಕೋಟಿಗಳನ್ನು ನಿರ್ಮಾಣ ಕಾಮಗಾರಿಗಾಗಿ ರೈಲ್ವೆ ಇಲಾಖೆಗೆ ಬಿಡುಗಡೆಗೊಳಿಸಲಾಗಿದೆ.

ಈ ರೈಲು ಮಾರ್ಗದ ಯೋಜನೆಗೆ ಅಗತ್ಯವಿರುವ ಜಮೀನನ್ನು ಕೆ.ಐ.ಎ.ಡಿ.ಬಿ. ವತಿಯಿಂದ ಭೂಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ.

ಈವರೆವಿಗೂ 1881.96 ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡು ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದೆ. ಉಳಿದ ಅಗತ್ಯವಿರುವ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಭೂಸ್ವಾಧೀನ ವೆಚ್ಚಕ್ಕಾಗಿ ಈವರೆವಿಗೂ ರೂ.289.66 ಕೋಟಿಯನ್ನು ಕೆ.ಐ.ಎ.ಡಿ.ಬಿ.ಗೆ ಬಿಡುಗಡೆ ಮಾಡಲಾಗಿದೆ.

ತಳಕಲ್–ಕುಷ್ಟಗಿ ವ್ಯಾಪ್ತಿಯ 56 ಕಿ.ಮೀ ಹಾಗೂ ಶಾಹಪುರ ವ್ಯಾಪ್ತಿಯ 47 ಕಿ.ಮೀ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

### 5.7 ಕೋಲಾರ ರೈಲು ಭೋಗಿ ಕಾರ್ಖಾನೆ:

ಕೋಲಾರ ಜಿಲ್ಲೆಯಲ್ಲಿ ಶೇ 50:50 ವೆಚ್ಚ ಹಂಚಿಕೆ ಆಧಾರದ ಮೇಲೆ ಹಾಗೂ ಅಗತ್ಯವಿರುವ ಜಮೀನನ್ನು ರಾಜ್ಯ ಸರ್ಕಾರವು ಉಚಿತವಾಗಿ ಒದಗಿಸುವ ಷರತ್ತಿನೊಂದಿಗೆ ಕಾರ್ಖಾನೆಯನ್ನು ಸ್ಥಾಪಿಸಲು ರೈಲ್ವೆ ಮಂತ್ರಾಲಯದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದೆ ಹಾಗೂ ಇದರ ಜೊತೆಗೆ 1118.8 ಎಕರೆ ಜಮೀನನ್ನು ಉಚಿತವಾಗಿ ನೀಡಲು ಸಹ ಒಪ್ಪಿಕೊಂಡಿರುತ್ತದೆ. ಈ ಬಗ್ಗೆ ರಾಜ್ಯ ಸರ್ಕಾರ ಮತ್ತು ರೈಲ್ವೆ ಇಲಾಖೆಯು ಈಗಾಗಲೇ ಮಾಡಿಕೊಳ್ಳಲಾಗಿದ ಒಡಂಬಂಡಿಕೆಯನ್ನು (MoU) ಸಹ ದಿನಾಂಕ:30.01.2019ರಿಂದ ಮುಂದಿನ 5 ವರ್ಷದವರೆಗೆ ಮುಂದುವರೆಸಲಾಗಿದೆ.

ಭಾರತ ಸರ್ಕಾರದ 2020-21ನೇ ಆಯವ್ಯಯದಲ್ಲಿ ಕೋಲಾರ ಜಿಲ್ಲೆಯಲ್ಲಿ ಕೋಚ್ ಕಾರ್ಖಾನೆ ಬದಲಿಗೆ ರೈಲು ರಿಪೇರಿ ಕೇಂದ್ರವನ್ನು ರೂ.495.00 ಕೋಟಿಗಳ ವೆಚ್ಚದಲ್ಲಿ ನಿರ್ಮಿಸಲು ತೀರ್ಮಾನಿಸಲಾಗಿದೆ.

### 5.8 ಶಿವಮೊಗ್ಗ– ಶಿಕಾರಿಪುರ– ರಾಣೆಬೆನ್ನೂರು ನೂತನ ರೈಲು ಮಾರ್ಗ ಯೋಜನೆ:

ಶಿವಮೊಗ್ಗ–ಶಿಕಾರಿಪುರ –ರಾಣಿಬೆನ್ನೂರು ನೂತನ ರೈಲು ಮಾರ್ಗ ಯೋಜನೆಯನ್ನು ಕೇಂದ್ರ ಸರ್ಕಾರದೊಂದಿಗೆ 50:50 ವೆಚ್ಚ ಹಂಚಿಕೆಯಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಸದರಿ ಯೋಜನೆಯ ಭೂಸ್ವಾಧೀನಕ್ಕೆ ವೆಚ್ಚಕ್ಕೆ ತಗಲುವ ವೆಚ್ಚ ರೂ.244.73 ಕೋಟಿಗಳನ್ನು ರಾಜ್ಯ ಸರ್ಕಾರದಿಂದ ನೀಡಲಾಗುತ್ತಿದೆ. ಯೋಜನೆಗೆ ಅಗತ್ಯವಿರುವ ಭೂಮಿಯನ್ನು ತ್ವರಿತವಾಗಿ ಭೂಸ್ವಾಧೀನಪಡಿಸಿಕೊಳ್ಳಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ವಹಿಸಲಾಗಿದೆ.

### 6. ಹುಬ್ಬಳ್ಳಿ – ಅಂಕೋಲಾ ನೂತನ ರೈಲು ಮಾರ್ಗ ಯೋಜನೆ:

ಈ ಯೋಜನೆಗೆ 595 ಹೆಕ್ಟೇರ್ ಅರಣ್ಯ ಭೂಮಿ ಸೇರಿದಂತೆ ಒಟ್ಟು 996 ಎಕರೆ ಭೂಮಿಯ ಅಗತ್ಯವಿರುತ್ತದೆ. ಇಲ್ಲಿಯವರೆಗೆ ಕರ್ನಾಟಕ ಸರ್ಕಾರವು 255.84 ಎಕರೆ ಖಾಸಗಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ರೈಲ್ವೆಗೆ ಹಸ್ತಾಂತರಿಸಿರುತ್ತಾರೆ. ದಿನಾಂಕ: 09.11.2017ರ ರಾಜ್ಯ ಸರ್ಕಾರದ ಪತ್ರದ ಮುಖೇನ ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯ ವನ್ಯ ಜೀವಿ ವಿಭಾಗಕ್ಕೆ ಅಗತ್ಯ ಇರುವ ಅರಣ್ಯ ಭೂಮಿಯನ್ನು ಪರಿವರ್ತಿಸಲು ಸಮ್ಮತಿಯನ್ನು ನೀಡುವಂತೆ ಕೋರಲಾಗಿತ್ತು. ದಿನಾಂಕ: 07.09.2018 ರಂದು ಮಾನ್ಯ ಮಂತ್ರಿಗಳು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಇಲಾಖೆ ಇವರ ನೇತೃತ್ವದಲ್ಲಿ ನಡೆದ ರಾಷ್ಟ್ರೀಯ ವನ್ಯ ಜೀವಿ ಮಂಡಳಿಯ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯ ರಾಜ್ಯ ವನ್ಯ ಜೀವಿ ಮಂಡಳಿಯ ಒಪ್ಪಿಗೆಯನ್ನು ಪಡೆದು ಪ್ರಸ್ತಾವನೆಯನ್ನು ಮರಳಿ ಸಲ್ಲಿಸುವಂತೆ ಹೇಳಲಾಗಿರುತ್ತದೆ.

ದಿನಾಂಕ: 26.02.2018 ರಿಂದ ಈ ಪ್ರಸ್ತಾವನೆಗೆ ರಾಜ್ಯ ವನ್ಯ ಜೀವಿ ಮಂಡಳಿಯಿಂದ ಈ ಒಪ್ಪಿಗೆಯನ್ನು ನಿರೀಕ್ಷಿಸಲಾಗುತ್ತಿದೆ. ರಾಜ್ಯ ವನ್ಯ ಜೀವಿ ಮಂಡಳಿಯ ಒಪ್ಪಿಗೆಯನ್ನು ಪಡೆದ ನಂತರ ಪ್ರಸ್ತಾವನೆಯನ್ನು ರಾಷ್ಟ್ರೀಯ ಮಂಡಳಿಗೆ ಕಳುಹಿಸಿ ಅನುಮೋದನೆಯನ್ನು ಪಡೆಯಬೇಕಾಗುತ್ತದೆ. ರಾಷ್ಟ್ರೀಯ ಮಂಡಳಿಯಿಂದ ಅನುಮೋದನೆ ದೊರೆತ ನಂತರ ಅರಣ್ಯ ಭೂಮಿಯನ್ನು ರೈಲ್ವೆ ಯೋಜನೆಗೆ ಹಸ್ತಾಂತರಿಸಲು ಕ್ರಮ ಕೈಗೊಳ್ಳಲಾಗುವುದು.

7. <u>ರಸ್ತೆ ಮೇಲು / ಕೆಳ ಸೇತುವೆ ನಿರ್ಮಾಣ ಕಾಮಗಾರಿಗಳು:</u>

ರಾಜ್ಯ ಸರ್ಕಾರವು ರೈಲ್ವೆ ಮಂತ್ರಾಲಯದೊಂದಿಗೆ ವೆಚ್ಚ ಹಂಚಿಕೆ ಆಧಾರದ ಮೇಲೆ 40 ಲೆವೆಲ್ ಕ್ರಾಸಿಂಗ್ ಗೇಟ್‌ಗಳಲ್ಲಿ ರಸ್ತೆ ಮೇಲು/ಕೆಳಸೇತುವೆ ನಿರ್ಮಾಣಕ್ಕಾಗಿ ಒಟ್ಟು ಅಂದಾಜು ವೆಚ್ಚ ರೂ.8742.32 ಕೋಟಿಗಳಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿ ಈವರೆವಿಗೂ ರೂ.11371.23 ಕೋಟಿಯನ್ನು ಬಿಡುಗಡೆಗೊಳಿಸಲಾಗಿದೆ. ರೈಲ್ವೆ ಇಲಾಖೆಯು ರಾಜ್ಯದಲ್ಲಿ ಒಟ್ಟಾರೆ 8 ರಸ್ತೆ ಮೇಲುಸೇತುವೆ / ಕೆಳಸೇತುವೆಯನ್ನು ಪೂರ್ಣಗೊಳಿಸಿದ್ದು, ಉಳಿದ ಕಾಮಗಾರಿ ಪ್ರಗತಿಯಲ್ಲಿದೆ.

8. <u>ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ, (ಕೆ–ರೈಡ್):</u>

ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ(ಕರ್ನಾಟಕ) ನಿಯಮಿತ, ಕೆ–ರೈಡ್, ಇದನ್ನು ರೈಲ್ವೆ ಮಂತ್ರಾಲಯ ಮತ್ತು ಕರ್ನಾಟಕ ಸರ್ಕಾರ ಇವುಗಳ ನಡುವೆ ಒಂದು ಜಂಟಿ ಸಹಭಾಗಿತ್ವ ಕಂಪನಿಯಾಗಿ ಕರ್ನಾಟಕದಲ್ಲಿನ ರೈಲ್ವೆ ಯೋಜನೆಗಳನ್ನು ಗುರುತಿಸುವ ಮತ್ತು ಅವುಗಳ ಅನುಷ್ಠಾನ ಕಾರ್ಯವನ್ನು ಕೈಗೊಳ್ಳುವ ಸಲುವಾಗಿ ಸ್ಥಾಪಿತವಾಗಿದ್ದು, ಕರ್ನಾಟಕ ಸರ್ಕಾರ ಈ ಸಂಸ್ಥೆಯಲ್ಲಿ ಭಾರತೀಯ ರೈಲ್ವೆಯೊಂದಿಗೆ 51:49ರ ಅನುಪಾತದಲ್ಲಿ ಪಾಲುದಾರಿಕೆಯನ್ನು ಹೊಂದಿದೆ. ಕೆ–ರೈಡ್‌ನ ಅಂಗೀಕೃತ ಬಂಡವಾಳವನ್ನು 20 ಕೋಟಿ ಯಿಂದ 100 ಕೋಟಿಗೆ ಹಾಗೂ ಪಾವತಿ ಮಾಡಿದ ಬಂಡವಾಳವನ್ನು 10 ಕೋಟಿಯಿಂದ 30 ಕೋಟಿಗೆ ಹೆಚ್ಚಿಸಲು ಕೆ–ರೈಡ್‌ನ ನಿರ್ದೇಶಕರ ಮಂಡಳಿ ನಿರ್ಧರಿಸಿದೆ.

ಕೆ-ರೈಡ್ ಸಂಸ್ಥೆಯು "ಸಬ್-ಅರ್ಬನ್ ರೈಲು ಯೋಜನೆ" ಯನ್ನು ಯೋಜಿಸುವ ಹಾಗೂ ಅನುಷ್ಠಾನಗೊಳಿಸುವ ಕಾರ್ಯದಲ್ಲಿ ತೊಡಗಿಕೊಂಡಿರುತ್ತದೆ.

9. <u>ಪಿಪಿಪಿ ಕೋಶ:</u>

9.1 ಪಿಪಿಪಿ ಕೋಶವು ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇವರ ಮೂಲಕ ಸರ್ಕಾರದ ವಿವಿಧ ಆಡಳಿತ ಇಲಾಖೆ / ಸಂಸ್ಥೆಗಳ ಅಧಿಕಾರಿಗಳಿಗೆ ಪಿಪಿಪಿ ಮಾದರಿಯ ಯೋಜನಾ ಅನುಷ್ಠಾನ ಕುರಿತಂತೆ ತರಬೇತಿ ನೀಡಲು ಸಾಮರ್ಥ್ಯ ಬಲವರ್ಧನೆ ತರಬೇತಿಗಳನ್ನು ಏರ್ಪಡಿಸುತ್ತದೆ. 2019–20ನೇ ಸಾಲಿನಲ್ಲಿ ಒಟ್ಟು 26 ಕಾರ್ಯಕ್ರಮಗಳನ್ನು ಏರ್ಪಡಿಸಿದ್ದು, ಈ ಕಾರ್ಯಕ್ರಮಗಳಲ್ಲಿ ಒಟ್ಟು 566 ಅಧಿಕಾರಿಗಳು ಭಾಗವಹಿಸಿರುತ್ತಾರೆ. ಈ ಪೈಕಿ 120 ಮಹಿಳಾಧಿಕಾರಿಯಾಗಿರುತ್ತಾರೆ.

9.2 ಲೆಕ್ಕ ಶೀರ್ಷಿಕೆ: 5465–01–190–1–20–211–ಕರ್ನಾಟಕ ಸ್ಥಿತ್ಯಂತರ ಬಂಡವಾಳ ಹೂಡಿಕೆ ಅಡಿಯಲ್ಲಿ 2019–20ನೇ ಸಾಲಿನಲ್ಲಿ ರೂ. 17.988 ಕೋಟಿಗಳ ಅನುದಾನವನ್ನು ಯಲಹಂಕ – ಆಂಧ್ರ ಪ್ರದೇಶ್ ಗಡಿ ರಸ್ತೆ ಯೋಜನೆಗೆ ಬಿಡುಗಡೆ ಮಾಡಲಾಯಿತು.

9.3 ಆಡಳಿತ ಇಲಾಖೆಗಳು ಮೂಲಸೌಲಭ್ಯ ಯೋಜನೆಗಳನ್ನು ಪಿಪಿಪಿ ಮಾದರಿಯಲ್ಲಿ ಅನುಷ್ಠಾನಗೊಳಿಸಲು ಕಾರ್ಯಸಾಧ್ಯತಾ ವರದಿಗಳನ್ನು ಮತ್ತು ಇತರೆ ಆರ್ಥಿಕ ವಿಶ್ಲೇಷಣೆಗಳನ್ನು ತಯಾರಿಸಬೇಕಾಗಿರುತ್ತದೆ. ಸಲಹೆಗಾರರನ್ನು ನೇಮಿಸಲು ಅಧಿಕ ಸಮಯ ಬೇಕಾಗುವ ಕಾರಣ ಇದನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ವಲಯವಾರು ಟ್ರಾನ್ಸಾಕ್ಷನ್ ಸಲಹೆಗಾರರ ಪಟ್ಟಿಯನ್ನು ಆಡಳಿತ ಇಲಾಖೆಗಳಿಗೆ ಒದಗಿಸಲಾಗಿದೆ.

9.4 ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಲ್ಲಿರುವ ಪಿಪಿಪಿ ಕೋಶವು ರಾಜ್ಯ ಸರ್ಕಾರದ ಸಂಸ್ಥೆಗಳಿಗೆ ಅವಶ್ಯಕತೆಗನುಸಾರವಾಗಿ ಪಿಪಿಪಿ ಯೋಜನೆಯ ಅಭಿವೃದ್ಧಿ ಹಂತಗಳಾದ ಪೂರ್ವ ಕಾರ್ಯಸಾಧ್ಯತಾ ವರದಿಗಳ ತಯಾರಿಕೆ, ಸಮಾಲೋಚಕರ ಆಯ್ಕೆ, ಬಿಡ್‌ಗಳ ಮೌಲ್ಯಮಾಪನ, ಭಾರತ ಸರ್ಕಾರದಿಂದ ಅನುದಾನವನ್ನು ಪಡೆಯಲು ಸಹಕರಿಸುತ್ತದೆ.

*****